**ಬಗೆಯನ್ನು ನೀವು ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಂಡಂತಿದೆ. ಇದಕ್ಕೆ ನೀವು ಮೇಲೆ ಹೇಳಿದ ಅನೇಕ ಅಂಶಗಳು ಕಾರಣವಾಗಿರಬಹುದು. ಇದರಿಂದ ಒಳ್ಳೆಯದೂ ಆಗಿರುವಂತೆ ನಿಮ್ಮ ವಿಮರ್ಶೆಯಲ್ಲಿ ಒಂದು ಸಣ್ಣ ಪ್ರಮಾಣದ ದಾಳಿಕೋರತನ, ಎದುರಿನವರನ್ನು ಗಾಯಗೊಳಿಸುವ ಗುಣ ಬಂದುಬಿಟ್ಟಿಲ್ಲವೆ? ನಿಮ್ಮ ವಿಮರ್ಶಾ ಸಂವೇದನೆಗೆ ಅವಸರದ, ತೀರ್ಪಿನ ಧಾಟಿ ಪ್ರಾಪ್ತವಾಗಿಲ್ಲವೆ? ಇದರರ್ಥ ನಿಮ್ಮ ಎಲ್ಲಾ ವಿಮರ್ಶೆಯೂ ಹೀಗೆಯೇ ಇದೆ ಅಂತಲ್ಲ. ಆದರೆ ಇಂಥದ್ದೊಂದು ಮುಖವೋ, ಮುಖವಾಡವೋ ಎದುರಿನ ಬರಹಗಳನ್ನು ಅರಿಯುವ ಹಲವು ದಾರಿಗಳನ್ನು ತಾವಾಗಿಯೇ ಮುಚ್ಚಲಿಲ್ಲವೇ?**

(ದೀರ್ಘ ಮೌನ)... ಇದಕ್ಕೆ ಹೇಗೆ ಉತ್ತರಿಸಬೇಕೋ ತಿಳಿಯದು. ನಾನು ಭಂಜಕ ನಿಜ. ಮುಖ್ಯವಾಗಿ ಸಾಹಿತ್ಯ ಸೃಷ್ಟಿಯೇ ನನಗೆ ಚಳವಳಿ. ನಾನು ವಿದ್ಯಾರ್ಥಿ ಆಗಿದ್ದಾಗ ಮಾರ್ಕ್ಸ್‌ವಾದಿ ವಿಚಾರಕ್ಕೆ ಅಂಟಿಕೊಂಡಿದ್ದೆ. ಸಾಕೇತ ರಾಜನ್ ಸ್ನೇಹ ಸಿಕ್ಕಾಗ ಈ ವ್ಯವಸ್ಥೆಯಲ್ಲಿ ಏನೂ ಆಗುವುದಿಲ್ಲ ಎಂದು ಬಂದೂಕು ಹಿಡಿಯಲು ಮುಂದಾಗಿದ್ದೆ. ನಂತರ ಸಮಾಜವಾದಿಗಳ ಕಂಡೆ. ಅಲ್ಲಿ ಗಾಂಧೀವಾದಿಗಳನ್ನೂ ಪ್ರೀತಿಸಿದೆ. ಕೊನೆಗೆ ಅಂಬೇಡ್ಕರ್ ಅವರ ಚಿಂತನೆಗಳಲ್ಲಿ ಕರಗಿಹೋದೆ. ಹಾಗೆಯೇ ಹತ್ತಾರು ಮಾನವಿಕ ವಿಜ್ಞಾನಗಳ ಓದಿನಿಂದ ಇಡೀ ವ್ಯವಸ್ಥೆಯ ವಿರುದ್ಧವೇ ದಂಗೆ ಏಳಬೇಕೆನಿಸಿತು. ಇದು ಈಗಲೂ ಹಾಗೇ ಇದೆ. ಜನತೆಯ ಪರವಾಗಿ ಹಕ್ಕೊತ್ತಾಯ ಮಾಡುವ ದಂಗೆಕೋರರು ನನ್ನ ಸುಪ್ತ ಪ್ರಜ್ಞೆಯಲ್ಲಿರುತ್ತಾರೆ. ಅವರು ಸಾಹಿತ್ಯ ಚಿಂತನೆಯ ತಕರಾರಿನ ಗಳಿಗೆಗಳಲ್ಲಿ ನನ್ನ ನಿಯಂತ್ರಣ ಮೀರಿ ಹೊರಬಂದು ಆಕ್ರಂದಿಸುತ್ತಾರೆ. ಭಾಗಶಃ ಇದು ಸಮಷ್ಟಿ ಸಮಸ್ಯೆಯ ಅವ್ಯಕ್ತ ಪರಿಣಾಮವಿರಬಹುದು. ವಚನಕಾರರು ಸೌಮ್ಯ ದಂಗೆಕೋರರಲ್ಲವೆ? ಅಲ್ಲಮ ಮಿಸ್ಟಿಕ್ ಆದ ದಂಗೆಕೋರ ಅಲ್ಲವೆ? ಮಲೆ ಮಾದೇಶ್ವರ, ಮಂಟೇಸ್ವಾಮಿ ದಂಗೆ ಎದ್ದವರೇ ತಾನೆ? ಅಂತಹ ಕಾವ್ಯ ಮತ್ತು ವಚನಗಳ ಕಟ್ಟಿ ಹಾಡುತ್ತಾ ಬಂದವರ ಪರಂಪರೆ ಬರೀ ಭಾಷೆಯ ಹುಡುಕಾಟವೇ? ಬಾಬಾ ಸಾಹೇಬ್ ಅಂಬೇಡ್ಕರರ ಏಕಾಂಗಿ ದಂಗೆಕೋರತನ ಒಂದು ಬೃಹತ್ ಕಥಾನಕ ಅಲ್ಲವೇ? ನಿಜವಾದ ಲೇಖಕನ ಪ್ರಜ್ಞೆಯು ಕಮ್ಮಾರರ ಕುಲುಮೆಯಂತಿರಬೇಕು. ಬೆಂಕಿಯನ್ನು ಬೆಳಕಾಗಿಸುವ ಸೃಜನಶೀಲತೆಯು ಭಗ್ನಗೊಂಡೇ ಬರುತ್ತದೆ. 'ನಮ್ಮೂರು ಚಂದವೊ ನಿಮ್ಮೂರು ಚಂದವೊ' ಎಂದು ಹಾಡುವ ಕವಿ, 'ಹೆಂಡತಿ ಒಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರೂಪಾಯಿ' ಎನ್ನುವುದು ತಮಾಷೆಯಂತಿದೆ. ಸಿದ್ಧಲಿಂಗಯ್ಯ ಹಾಗೂ ಎನ್.ಕೆ. ಹನುಮಂತಯ್ಯ ಅವರ ಕವಿತೆಗಳಲ್ಲಿ ಏನಿದೆ ಎಂದು ಹುಡುಕಬೇಕಿಲ್ಲ. ಅವರ ಕಾವ್ಯದ ಜ್ವಾಲೆಯು ಥಟ್ಟನೆ ತಟ್ಟುತ್ತದೆ. ನಾನು ನನ್ನ ವಿಮರ್ಶೆಯಿಂದ ಅನೇಕರಿಗೆ ಹರ್ಟ್ ಮಾಡಿರುವೆ. ಇಲ್ಲ ಅಂತ ನಾನು ಹೇಳುವುದಿಲ್ಲ. ಹಾಗೆ ಮಾಡದೆ ನನಗೆ ಬೇರೆ ದಾರಿ ಇರಲಿಲ್ಲ. ನಾನು ಬಹಿರಂಗ ಪಡಿಸಲೇಬೇಕಾಗಿತ್ತು. ಸಾಹಿತ್ಯಾಸಕ್ತಿಯ ಕೃತಕ ಗುಂಪುಗಳನ್ನು ಕಂಡರೆ ನನಗೆ ಸಿಟ್ಟು ತಡೆದುಕೊಳ್ಳಲು ಆಗುವುದಿಲ್ಲ. ನಮ್ಮ ಕಾಲದ ಸೃಜನಶೀಲತೆಯಲ್ಲಿ ಒಂದು ಭ್ರಷ್ಟಾಚಾರ ನಡೆಯುತ್ತಿದೆ ಅಂತ ಅನೇಕ ಸಲ ನನಗೆ ಅನಿಸುತ್ತದೆ. ನಾವು ರಾಜಕಾರಣಿಗಳ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತೇವೆ. ಆದರೆ ಲೇಖಕರೇ ತಮ್ಮ ಹಿತಾಸಕ್ತಿಗಾಗಿ ಭ್ರಷ್ಟರಾಗುತ್ತಿಲ್ಲವೇ? ಸೃಜನಶೀಲತೆಯ, ಸಾಹಿತ್ಯದ ಈ ಭ್ರಷ್ಟಾಚಾರದ ವಿರುದ್ಧ ನಾನು ಮಾತನಾಡಲೇಬೇಕಾಗಿದೆ. ಸಾಹಿತ್ಯದಲ್ಲೂ ಅಕ್ರಮಗಳನ್ನೆಲ್ಲ ಸಕ್ರಮ ಮಾಡುವ ಗುಂಪುಗಳಿರುತ್ತವೆ. ಸೃಜನಶೀಲತೆಯ ಅಕ್ರಮಗಳು ತುಂಬಿತುಳುಕುತ್ತಿರುವ ಈ ಕಾಲದಲ್ಲಿ ನಿಜಕ್ಕೂ ನಾನು ನನ್ನದೇ ರೀತಿಯಲ್ಲಿ ಪ್ರತಿಕ್ರಿಯಿಸಬೇಕಾಗಿದೆ. ನನಗೆ ಈ ಹೊತ್ತಿನಲ್ಲಿ ಪೂರ್ಣಚಂದ್ರ ತೇಜಸ್ವಿ ತುಂಬಾ ನೆನಪಾಗುತ್ತಾರೆ. ಸಲ್ಮಾನ್ ರಶ್ದಿ ನೆನಪಾಗುತ್ತಾರೆ. ಯಾವುದೇ ವ್ಯವಸ್ಥೆ ಇರಲಿ, ಅದು ಲೇಖಕರನ್ನು ಆಪೋಷನ ತೆಗೆದುಕೊಳ್ಳುತ್ತದೆ. ನಾವು ವ್ಯವಸ್ಥೆಯ ವಿರುದ್ಧ ಬಂಡೇಳದಂತೆ ಮಾಡುತ್ತದೆ. ಆ ಮಟ್ಟಕ್ಕೆ ನಾನು ಬಂಡುಕೋರನೆ. ಯಾಕೆಂದರೆ ನಾನು ಲಂಕೇಶ್ ವಿಶ್ವವಿದ್ಯಾಲಯದ ವಿದ್ಯಾರ್ಥಿ. ನಾವು ಆ ಬಂಡುಕೋರತನವನ್ನು ಉಳಿಸಿಕೊಳ್ಳಬೇಕಲ್ಲವೇ?

◆ **ನೀವು ಬರೆಯುತ್ತಿದ್ದಾಗ ನಿಮ್ಮ ಜೊತೆ ಅನೇಕರು ಬರವಣಿಗೆ ಮಾಡುತ್ತಿದ್ದರು. ಅವರ ಬರವಣಿಗೆ**